## ಕಥೆ

ತಿಂಗಳುಗಳು ತುಂಬುತ್ತಾ ಬಂದಂತೆ ರಾಧಾ ಆಫೀಸಿಗೆ ರಜೆ ಹಾಕಿ ಮನೆಯಲ್ಲಿಯೇ ಉಳಿದಳು. ರಂಗನಾಥನೇ ಅವಳನ್ನು ಆಗಾಗ್ಗೆ ವೈದ್ಯರಲ್ಲಿಗೆ ಕರೆದೊಯ್ದು ಪರೀಕ್ಷೆ ಮಾಡಿಸುತ್ತಿದ್ದ. ಜತೆಗೆ ಔಷಧಿ, ಮಾತ್ರೆ, ಹಣ್ಣು ಹಂಪಲು, ಹೋಟೆಲಿನಿಂದ ತಿಂಡಿ ಊಟ ತಂದು ಕೊಡುತ್ತಿದ್ದ. ಹಗಲೊತ್ತು ನೋವು ಕಾಣಿಸಿಕೊಂಡರೆ ತನಗೆ ಫೋನು ಮಾಡುವಂತೆ ತಿಳಿಸಿದ್ದ. ಆಫೀಸಿನಲ್ಲಿದ್ದಾಗ ಅವನೇ ಫೋನು ಮಾಡಿ ವಿಚಾರಿಸುತ್ತಿದ್ದ. ವೈದ್ಯರು ಹೇಳಿದಂತೆ ಹೆರಿಗೆ ದಿನ ಸಮೀಪಿಸಿದಂತೆ ಅವಳ ಮನೆಯಲ್ಲಿಯೇ ರಾತ್ರಿ ಉಳಿಯತೊಡಗಿದ. ಅವನ ಮಾನವೀಯ ನಡೆಯಿಂದ ಅವಳ ಮನಸ್ಸು ತುಂಬಿ ಬಂದಿತ್ತು.

ಆಸ್ಪತ್ರೆಯಲ್ಲಿ ರಾಧಾ, ಕೃಷ್ಣಯ್ಯಂಗಾರಿಯಂತೆ ಮೈಕೈ ತುಂಬಿಕೊಂಡಿದ್ದ ಮುದ್ದಾದ ಗಂಡು ಮಗು ಹೆತ್ತಳು. ಈ ವಿಷಯವನ್ನು ರಂಗನಾಥ, ಕೃಷ್ಣಯ್ಯಂಗಾರಿಗೆ ಹೇಳಿದಾಗ ಅವನು ನಿರ್ಲಿಪ್ತ, ನಿರ್ಮೋಹಿ, ನಿರ್ಭಾವುಕನಾಗಿ 'ಹೌದಾ' ಎಂದಷ್ಟೇ ಪ್ರತಿಕ್ರಿಯಿಸಿದ.

ವರ್ಷ ಕಳೆದಂತೆ ಮಗುವನ್ನು ಕಾನ್ವೆಂಟಿಗೆ ಸೇರಿಸಲು ಹೋದಾಗ ಅಲ್ಲಿ, 'ಮಗುವಿನ ತಂದೆ ಹೆಸರೇನು?' ಎಂದು ಕೇಳಿದಾಗ 'ಕೃಷ್ಣಯ್ಯಂಗಾರಿ ಅಂತ. ಅವರು ತೀರಿಕೊಂಡಿದ್ದಾರೆ' ಎಂದು ಹೇಳಿದಾಗ ಅವಳ ಮನಸ್ಸಿನ ಕಾಠಿಣ್ಯತೆಗೆ ಜೊತೆಯಲ್ಲಿದ್ದ ರಂಗನಾಥ ದಂಗು ಬಡಿದು ಹೋದ.

ಕಾನ್ವೆಂಟಿನಿಂದ ಹೊರ ಬಂದಾಗ ರಂಗನಾಥ, 'ಅದೇಕೆ ಗಂಡ ತೀರ್ಕೊಂಡಿದ್ದಾನೆ ಅಂತ ಹೇಳಿದೆ' ಎಂದು ಕೇಳಿದಾಗ, 'ಸ್ಕೂಲ್ ಡೇ ಪೇರೆಂಟ್ಸ್ ಮೀಟಿಂಗಿಗೆಲ್ಲ ಬರುವಾಗ ಅಪ್ಪನ್ನ ಕರ್ಕೊಂಡು ಬನ್ನಿ ಅಂತೆಲ್ಲ ಹೇಳ್ತಾರೆ. ಆ ರಗಳೆ ಎಲ್ಲಾ ಬೇಡ ಅಂತಾನೆ ಹಾಗೇಳಿದೆ. ಅಷ್ಟಕ್ಕೂ ಅವನೇನು ನನ್ನ ಗಂಡನೇ' ಎಂದು ತುಂಟ ನಗೆ ನಕ್ಕಳು.

'ಸಂಬಂಧಗಳ ಬಗ್ಗೆ ಇಷ್ಟೊಂದು ನಿಷ್ಠುರ, ನಿರ್ದಾಕ್ಷಿಣ್ಯ ತೋರುವ ನೀನು ನಿಜವಾಗಲೂ ಈ ಮಗುವನ್ನು ಚೆನ್ನಾಗಿ ನೋಡಿಕೊಳ್ಳುತ್ತೀಯಾ? ನನಗೇನೋ ಅನುಮಾನ'.

'ರಂಗನಾಥ, ಸೃಷ್ಟಿಯ ಮೂಲ ಯಾವುದಾದರೇನು, ಅದನ್ನು ಪೊರೆಯುವವಳು ತಾಯೇ ಅಲ್ಲವೇನೋ. ನಾನು ಅಷ್ಟೊಂದು ಕಟುಕಳಲ್ಲ ಕಣೋ'

'ಅಂತೂ ಸಂಸಾರದ ಬಂಧನವಿಲ್ಲದೆ ತಾಯಿಯಾದೆ'

'ಯಾವಳಿಗೆ ಬೇಕೋ ಅತ್ತೆ, ಮಾವ, ನಾದಿನಿಯರ ಕಾಟ, ಗಂಡನ ಯಜಮಾನಿಕೆ, ಕುಟುಂಬದವರ ಬಿಟ್ಟಿ ಚಾಕರಿಕೆ. ನೀನೇ ಒಂದಿನ ಹೇಳ್ತೀಯ. ಸಂಸಾರದ ಬಂಧನಕ್ಕೆ ಸಿಲುಕಿ ಪಡಿಪಾಟಲು ಪಡುತ್ತಿರುವವರಿಗಿಂತ ನನ್ನ ನಿರ್ಧಾರವೇ ಬೆಸ್ಟ್ ಅಂತ'

'ರಾಧಾ, 'ನಾಥನಿಲ್ಲದ ತರುಣಿಯಾ ಬಾಳ್ ಬರಿಯಾ ಪಾಳ್' ಎಂದು ಕುವೆಂಪು ಹೇಳಿದ್ದಾರೆ. ಯೋಚನೆ ಮಾಡು' ಎಂದ.

*

ಎರಡು ವರ್ಷಗಳು ಕಳೆದವು. ಅದೊಂದು ದಿನ ರಾತ್ರಿ ಬಾಗಿಲು ಬಡಿಯುವ ಶಬ್ದ ಕೇಳಿ ಬಂದಿತು. ಮಗುವಿನ ಪಕ್ಕ ಮಲಗಿದ್ದ ರಾಧಾ ಎಚ್ಚರಗೊಂಡು ಮೇಲೆದ್ದು ಲೈಟ್ ಹಾಕಿ ಗಡಿಯಾರ ನೋಡಿದಳು. ಹನ್ನೆರಡು ಗಂಟೆ ಸಮಯವಾಗಿತ್ತು.

'ಯಾರು ಇಷ್ಟೊತ್ತಿನಲ್ಲಿ ಬಂದಿರೋರು, ರಂಗ ಇರಬಹುದೇ' ಎಂದುಕೊಳ್ಳುತ್ತಾ ಬಾಗಿಲ ಬಳಿ ನಿಂತು, 'ಯಾರು?' ಎಂದಳು. ಅವಳ ಪ್ರಶ್ನೆಗೆ ಹೊರಗಿನಿಂದ ಉತ್ತರ ಬರಲಿಲ್ಲ. ಗಟ್ಟಿ ದನಿಯಲ್ಲಿ, ಯಾರದು? ಎಂದರೂ ಬಾಗಿಲು ಬಡಿಯುವ ಶಬ್ದ ಮಾತ್ರ ಜೋರಾಯಿತು. ರಾಧಾ ಕೋಪದಿಂದ 'ಯಾರ್ರೀ ಅದು?' ಎಂದಳು.

'ರಾ.........ಧಾ........ನಾ..ನು...' ಪರಿಚಿತವಾದ ಧ್ವನಿ. ಹೌದು ಕೃಷ್ಣಯ್ಯಂಗಾರಿ, ಇಷ್ಟು ವರ್ಷ ಬಾರದವನು ಇವತ್ತೇಕೆ ಬಂದ? ಎಂದುಕೊಳ್ಳುತ್ತಲೇ ಬಾಗಿಲು ತೆರೆದಳು.

ಬಾಗಿಲು ನೂಕಿಕೊಂಡೇ ಒಳಬಂದ ಕೃಷ್ಣಯ್ಯಂಗಾರಿ ತಡವರಿಸಿ ಹೆಜ್ಜೆ ಹಾಕಿ ಕೊನೆಗೆ ತಹಬಂದಿಗೆ ಬಂದು ನಿಂತ. ಅವನ ಕಣ್ಣುಗಳು ಕೆಂಪಾಗಿದ್ದವು. ಮಿಲನದ ದಿನ ಸುಗಂಧಭರಿತ ಸುವಾಸನೆ ಸೂಸುತ್ತ ಮನೆಗೆ ಬಂದಿದ್ದ. ಅವನು ಈಗ ವಾಕರಿಕೆ ತರಿಸುವಷ್ಟು ಕುಡಿದು ಬಂದಿದ್ದ. ಅವನ ಬಾಯಿಯಿಂದ ಹೊರ ಹೊಮ್ಮುತ್ತಿದ್ದ ದುರ್ವಾಸನೆ ಸಹಿಸಲಾರದೆ ರಾಧಾ ಮುಖ ಮುಚ್ಚಿಕೊಂಡಳು.

'ರೀ ಯಾಕ್ರೀ ಬಂದ್ರಿ ಇಲ್ಲಿಗೆ. ನಡೀರಿ ಆಚೆ' ಎಂದು ಗದರಿದಳು.

'ರಾಧಾ ನೀ.....ನು ನನಗೆ ಬೇಕು'